ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ (ದಂಡು).

ಇದೇ ವಾರಕ್ಕೆ ಹಿಂದಿನ 5 ವರ್ಷಗಳ ಅಂದಾಜು.

ಆಹಾರ ಜಿನಸಿಗಳ ಧಾರಣೆಗಳು :—

			ಚಾಲ್ತಿ.	
ಅಕ್ಕಿ	ರೂಪಾಯಿ	ಕ್ಕೆ	$7\frac{3}{4}$	6 ರಿಂದ $6\frac{1}{2}$ ವರಿಗೆ } ಸೇರುಗಳು.
ರಾಗಿ	,,	,,	$20\frac{3}{4}$	12 ರಿಂದ 13 ವರಿಗೆ }

ಕಾಲದ ಆಯತಿ—ಮಳೆಯು ಬಾರದೇ ಇರುವದು ಕಷ್ಟವಾಗಿದೆ.

ದನಗಳು ಬಳ್ಳೀ ಸ್ಥಿತಿಯಲ್ಲಿವೆ. ನೀರೂ ಹುಲ್ಲೂ ಸಾಕು.

ಬೆಂಗಳೂರುಪಟ್ಟಣ ಮತ್ತು ತಾಲ್ಲೂಕುಗಳು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕಾರ್ಯ—ವಿನೂ ಇಲ್ಲ.

ನಿಂತಿರುವ ಪೈರುಗಳು—ಯಾವವಂದರೆ, ರಾಗಿ ಮುಂತಾದವುಗಳು; ಕಾರ್ಕಾರಹಳ್ಳಿ, ಆನೇಕಲ್ಲು, ಚನ್ನಪಟ್ಟಣ, ಹೊರ್ತು ಡಿಸ್ಟ್ರಿಕ್ಟಿನ ವಿಕ್ಕ ಎಲ್ಲಾ ಕಡೆಗಳಲ್ಲಿಯೂ ಬಾಡಿ ಹೋಗುತ್ತಿವೆಯೆಂದು ರಿಪೋರ್ಟಾಗಿದೆ. ಕಾರ್ಕಾರಹಳ್ಳಿ, ಆನೆಕಲ್ಲು, ಚನ್ನಪಟ್ಟಣ, ಇವುಗಳಲ್ಲಿ ರಾಗಿಯನ್ನು ಕುಯ್ಯುತ್ತಿದ್ದಾರೆ. ದೊಡ್ಡಬಳ್ಳಾಪುರದ ತಾಲ್ಲೂಕಿನಲ್ಲಿ ಮೊದಲು ಬಿತ್ತನೆಯಾದ ಪೈರುಗಳು ಸುಮಾರಾಗಿ ಬಳ್ಳೀ ಸ್ಥಿತಿಯಲ್ಲಿವೆ. ಡಿಸ್ಟ್ರಿಕ್ಟಿನಲ್ಲೆಲ್ಲಾ ಮಳೆಯು ಬಹಳವಾಗಿ ಬೇಕಾಗಿದೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸಿ ಸಾಕಾದಷ್ಟು ಇವೆ.

11. ಕಸಬಾ ಹೊಸಕೋಟೆ, ಕಾರ್ಕಾರಹಳ್ಳಿ, ಚನ್ನಪಟ್ಟಣ, ಕ್ಲೋಸ್‌ಪೇಟೆ, ಇವುಗಳಲ್ಲಿಯೂ ಮತ್ತು ನೆಲಮಂಗಲ, ದೊಡ್ಡಬಳ್ಳಾಪುರ, ಹೊಸಕೋಟೆ, ಕ್ಲೋಸ್‌ಪೇಟೆ, ಆನೆಕಲ್ಲು, ಚನ್ನಪಟ್ಟಣ, ಈ ತಾಲ್ಲೂಕುಗಳ ಕೆಲವು ಗ್ರಾಮಗಳಲ್ಲಿಯೂ ಪ್ಲೇಗ್ ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ. ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಹುಲ್ಲು ಸಾಕಾಗಿಲ್ಲವೆಂದು ರಿಪೋರ್ಟಾಗಿದೆ.

ಕೋಲಾರ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕಾರ್ಯ—ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿ ಕಾರ್ತೀಕ ಭತ್ತದ ಗದ್ದೆಗಳಲ್ಲಿ ಕಳೀ ಕೀಳುವ ಕೆಲಸವು ನಡೆಯುತ್ತಿದೆ.

ನಿಂತಿರುವ ಪೈರುಗಳು—ಬಳ್ಳೀ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ. ಆದರೆ, ಡಿಸ್ಟ್ರಿಕ್ಟಿನೆಲ್ಲೆಲ್ಲಾ ಕುಷ್ಕೀ ಪೈರುಗಳಿಗೆ ಮಳೆಯು ಹೆಚ್ಚಾಗಿ ಬೇಕಾಗಿದೆ.

ಕುಯ್ಯಲಾದ ಪೈರುಗಳು—ಕೋಲಾರ, ಬೌರಿಂಗ್‌ಪೇಟೆ, ಚಿಂತಾಮಣಿ, ಶಿಡ್ಲಘಟ್ಟ, ಬಾಗೇಪಲ್ಲಿ, ಮಾಲೂರು, ಶ್ರೀನಿವಾಸಪುರ, ಗುಡಿಬಂಡೆ, ಇವುಗಳಲ್ಲಿ ಸಾವೆ; ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಬಾಗೇಪಲ್ಲಿ, ಗೋರೀಬಿದನೂರು ಇವುಗಳಲ್ಲಿ ಗಿಡ್ಡರಾಗಿ.

ಪೈರುಗಳ ಉತ್ಪತ್ತಿ :—

ಶಿಡ್ಲಘಟ್ಟದಲ್ಲಿ	ಗಿಡ್ಡರಾಗಿ	ಉತ್ಪತ್ತಿ	...	6 ಆಣೆ.
ಚಿಕ್ಕಬಳ್ಳಾಪುರದಲ್ಲಿ	ಡಿಟೋ		...	8 ,,
ಬಾಗೇಪಲ್ಲಿಯಲ್ಲಿ	ಡಿಟೋ		...	4 ರಿಂದ 8 ಆಣೆ ವರಿಗೆ.
ಗೋರೀಬಿದನೂರಿನಲ್ಲಿ	ಡಿಟೋ		...	4 ಆಣೆ.
ಶ್ರೀನಿವಾಸಪುರದಲ್ಲಿ	ಸಾವೆ	ಉತ್ಪತ್ತಿ	...	4 ರಿಂದ 8 ಆಣೆ ವರಿಗೆ.
ಚಿಂತಾಮಣಿಯಲ್ಲಿ	ಡಿಟೋ		...	4 ಆಣೆ.
ಬಾಗೇಪಲ್ಲಿಯಲ್ಲಿ	ಡಿಟೋ		...	8 ,,
ಶಿಡ್ಲಘಟ್ಟದಲ್ಲಿ	ಡಿಟೋ		...	4 ,,
ಗುಡಿಬಂಡೆಯಲ್ಲಿ	ಡಿಟೋ		...	8 ,,

10. ಕಾಲದ ಆಯತಿಯು ಸಾಧಾರಣವಾಗಿ ಚೆನ್ನಾಗಿದೆ. ಆಹಾರ ಜಿನಿಸಿ ಸಿಕ್ಕುತ್ತವೆ.

11. ಕೋಲಾರದ ಚನ್ನೈಪ ಪೇಟೆಯಲ್ಲಿಯೂ, ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿ ಕೆಲವು ಗ್ರಾಮಗಳಲ್ಲಿಯೂ ಮತ್ತು ಕಸಬಾ ಕೋಲಾರದಲ್ಲಿಯೂ ಪ್ಲೇಗು ಮತ್ತು ಕಸಬಾ ಚಿಂತಾಮಣಿಯಲ್ಲಿಯೂ ಮತ್ತು ಅದಕ್ಕೆ ಸೇರಿದ ಕೆಲವು ಗ್ರಾಮಗಳಲ್ಲಿಯೂ ಸೀಳೆ ಸಿಡುಬೂ ಮತ್ತು ಸಿಡುಬೂ, ಇವುಗಳು ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

287
799

ತುಮಕೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಮಳೇ ಇಲ್ಲದ್ದರಿಂದ ಬಾಡಿಹೋಗುತ್ತಿವೆ.

ಬಿತ್ತನೆಯಾದ ಪೈರುಗಳು—ಸೀರ್ಯದಲ್ಲಿ ಜೋಳ ; ಸೀರ್ಯ ಮತ್ತು ತುರುವೇಕೆರೆ ಇವುಗಳಲ್ಲಿ ಕಡಲೆ ; ತುರುವೇಕೆರೆಯಲ್ಲಿ ಧನಿಯಾ.

ಕುಯ್ಯಲಾದ ಪೈರುಗಳು—ತುಮಕೂರಿನಲ್ಲಿ ಭತ್ತ ; ಮದ್ದಗಿರಿ, ಕೊರ್ಟಗೆರೆ, ಇವುಗಳಲ್ಲಿ ರಾಗಿ ; ಸಾವೆ ಮತ್ತು ನವಣೆ ; ಸೀರ್ಯದಲ್ಲಿ ಹುರುಳಿ ; ಗುಬ್ಬಿಯಲ್ಲಿ ಕಬ್ಬು ; ಕೊರ್ಟಗೆರೆಯಲ್ಲಿ ಜೋಳ ; ಗುಬ್ಬಿಯಲ್ಲಿ ಕಡ್ಲೇಕಾಯಿ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜೆನಸು ಸಾಕು.

11. ಕಸಬಾ ತುಮಕೂರು ಮತ್ತು ಚಿಕ್ಕನಾಯಕನಹಳ್ಳಿ ಇವುಗಳಲ್ಲಿ ಪ್ಲೇಗ್ ಇರುವದು ಹೊರ್ತು, ಜನಾರೋಗ್ಯವು ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಮೈಸೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕಾರ್ಯಗಳು—ಶ್ರೀರಂಗಪಟ್ಣ, ಮಳವಳ್ಳಿ ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಕಳೇ ಕೀಳುವ ಕೆಲಸವು ನಡೆಯುತ್ತಲಿದೆ.

ನಿಂತಿರುವ ಪೈರುಗಳು—ಮೈಸೂರು, ಮಳವಳ್ಳಿ, ನಾಗಮಂಗಲ ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ನಿಂತಿರುವ ಪೈರುಗಳು ಬಣಗಿ ಹೋಗುತ್ತಲಿವೆಯೆಂದು ರಿಪೋರ್ಟಾಗಿರುವದು ಹೊರ್ತು, ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಅವುಗಳು ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ. ನಾಗಮಂಗಲದ ತಾಲ್ಲೂಕಿನಲ್ಲಿ ಈಚೆಗೆ ಬಿದ್ದ ಮಳೆಯಿಂದ ಪೈರುಗಳಿಗೆ ಸ್ವಲ್ಪ ಒಳ್ಳೇದು ಆಗಿದೆಯೆಂದು ರಿಪೋರ್ಟಾಗಿದೆ.

ಕುಯ್ಯಲಾದ ಪೈರುಗಳು—ಮೈಸೂರು ತಾಲ್ಲೂಕಿನಲ್ಲಿ ರಾಗಿ, ಹೆಸರು ಮತ್ತು ಹಲಸಂದಿ.

10. ಕಾಲದ ಆಯತಿಯು ಚೆನ್ನಾಗಿದೆ. ಹುಣಸೂರು, ಗುಂಡ್ಲುಪೇಟೆ, ನಂಜನಗೂಡು, ಮಳವಳ್ಳಿ, ಮಂಡ್ಯ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ನಿಂತಿರುವ ಪೈರುಗಳಿಗೆ ಮಳೆಯು ಜೀಕಾಗಿವೆಯೆಂದು ರಿಪೋರ್ಟಾಗಿದೆ.

11. ಮೈಸೂರು, ಹುಣಸೂರು, ಗುಂಡ್ಲುಪೇಟೆ, ನಂಜನಗೂಡು ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಪ್ಲೇಗ್ ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದ.

12. ಎಲ್ಲಾ ತಾಲ್ಲೂಕುಗಳಲ್ಲಿಯೂ ದನಗಳು ಆರೋಗ್ಯವಾಗಿವೆಯೆಂದು ರಿಪೋರ್ಟಾಗಿದೆ. ಎಲ್ಲಾ ಕಡೆಯಲ್ಲಿಯೂ ನೀರೂ, ಹುಲ್ಲೂ ಸಿಕ್ಕುತ್ತವೆ.

ಹಾಸನ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಹಾಸನ, ಹೊಳೇನರಸೀಪುರ, ಚನ್ನರಾಯಪಟ್ಣ, ಅರ್ಕಲಗೂಡು ಈ ತಾಲ್ಲೂಕುಗಳಲ್ಲಿ ಭತ್ತ, ಕಬ್ಬು, ಅವರೆ, ಹುರುಳಿ ಮುಂತಾದವುಗಳು ; ಅರ್ಕಲಗೂಡು ತಾಲ್ಲೂಕಿನಲ್ಲಿ ತೊಗರಿ ಮತ್ತು ಮೆಣಸಿನಕಾಯಿ ; ಬೇಲೂರು ತಾಲ್ಲೂಕಿನಲ್ಲಿ ಭತ್ತ ; ಇವುಗಳೆಲ್ಲಾ ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ. ಅರಕೀಕೆರೆ ತಾಲ್ಲೂಕಿನಲ್ಲಿ ಭತ್ತ, ರಾಗಿ, ಕಬ್ಬು, ಹರಳು, ಕಾಡು ಹುಚ್ಚೆಳ್ಳು, ತೊಗರಿ, ಅವರೆ, ಇವುಗಳು ಮಳೇ ಇಲ್ಲದ್ದರಿಂದ ಬಾಡಿಹೋಗುತ್ತಿವೆಯೆಂದು ರಿಪೋರ್ಟಾಗಿದೆ. ಅರಕೀಕೆರೆ ತಾಲ್ಲೂಕಿನಲ್ಲಿ ಮಳೇ ಇಲ್ಲದ್ದರಿಂದ ಕೆಲವು ಕಡೆಗಳಲ್ಲಿ ಬಿತ್ತಿದ್ದ ಕಡ್ಲೇ, ಕೊತ್ತಂಬರೀ ಪೈರುಗಳು ಬೆಳೆಯಾಗಿಲ್ಲವೆಂದೂ ರಿಪೋರ್ಟಾಗಿದೆ.

ಬಿತ್ತನೆಯಾದ ಪೈರು—ಹೊಳೇನರಸೀಪುರದ ತಾಲ್ಲೂಕಿನಲ್ಲಿ ಕಡ್ಲೇ.

ಕುಯ್ಯಲಾದ ಪೈರುಗಳು—ಮಂಜರಾಬಾದ್ ತಾಲ್ಲೂಕಿನಲ್ಲಿ ರಾಗಿ ಮತ್ತು ಚನ್ನರಾಯಪಟ್ಣದ ತಾಲ್ಲೂಕಿನಲ್ಲಿ ಕಬ್ಬು, ಇವುಗಳು ಕುಯ್ಯಲಾಗುತ್ತಿವೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜೆನಸು ಸಿಕ್ಕುತ್ತವೆ.

11. ಹಾಸನ, ಬೇಲೂರು, ಚನ್ನರಾಯಪಟ್ಣ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಪ್ಲೇಗ್ ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ಡಿಸ್ಟ್ರಿಕ್ಟಿನ ಎಲ್ಲಾ ಕಡೆಗಳಲ್ಲಿಯೂ ನೀರೂ, ಹುಲ್ಲೂ ಸಿಕ್ಕುತ್ತವೆ.

ಶಿವಮೊಗ್ಗ.

8. ಬಜಾರಿನಲ್ಲಿ ಸರಬ್ಬಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಯಾವವೆಂದರೆ, ಭತ್ತ, ರಾಗಿ, ಜೋಳ, ಕಬ್ಬು, ಇವುಗಳು ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಲ್ಲಿಯೂ ಒಳ್ಳೇ ಸ್ಥಿತಿಯಲ್ಲಿವೆ.

ಕುಯ್ಯಲಾದ ಪೈರುಗಳು—ಶಿವಮೊಗ್ಗ, ಚನ್ನಗಿರಿ ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ರಾಗಿ, ಹುಚ್ಚೆಳ್ಳು, ಹೆಸರು ಮತ್ತು ಉದ್ದು, ಸೊರಬದ ತಾಲ್ಲೂಕಿನಲ್ಲಿ ಭತ್ತ—ಇವುಗಳು ಕುಯ್ಯಲಾಗುತ್ತಿವೆ. ಕುಂಸಿ ಸಬ್ ತಾಲ್ಲೂಕು ಸೇರಿ ಮಲೆನಾಡು ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಅಡಿಕೆಯ ಫಸಲನ್ನು ಶೇಖರಿಸುತ್ತಾ ಇದ್ದಾರೆ.

10. ಕಾಲದ ಆಯತಿಯು ಸಾಧಾರಣವಾಗಿ ಚೆನ್ನಾಗಿದೆ. ಸಾಕಾದಷ್ಟು ಆಹಾರ ಜೆನಸು ಸಿಕ್ಕುತ್ತವೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆದರೆ, ಚನ್ನಗಿರಿ, ಸೊರಬ, ನಗರ ಈ ತಾಲ್ಲೂಕುಗಳಲ್ಲಿ ಸಿಡುಬು ಮತ್ತು ಶಿವಮೊಗ್ಗ, ಹೊನ್ನಾಳಿ ತಾಲ್ಲೂಕುಗಳಲ್ಲಿಯೂ ಮತ್ತು ಕುಂಸಿ ಸಬ್ ತಾಲ್ಲೂಕಿನಲ್ಲಿಯೂ ಪ್ಲೇಗು, ಇವುಗಳು ಇರುತ್ತಲಿವೆ.

12. ಶಿವಮೊಗ್ಗ ತಾಲ್ಲೂಕಿನ ಕೆಲವು ಭಾಗಗಳಲ್ಲಿಯೂ, ಕುಂಸಿ ಸಬ್ ತಾಲ್ಲೂಕಿನಲ್ಲಿಯೂ ಮತ್ತು ಸೊರಬ, ಸಾಗರ, ನಗರ ಈ ತಾಲ್ಲೂಕುಗಳಲ್ಲಿಯೂ ಗೋವೂರೀ ರೋಗವು ಇರುತ್ತಲಿದೆ. ನೀರೂ, ಹುಲ್ಲೂ ಸಾಕಾದಷ್ಟಿವೆ.

ಕಡೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕಾರ್ಯಗಳು— ಏನೂ ಇಲ್ಲ.

ನಿಂತಿರುವ ಪೈರುಗಳು—ಚಿಕ್ಕಮಗಳೂರು, ತರೀಕೆರೆ, ಕೊಪ್ಪ, ಮೂಡಿಗೆರೆ, ಎಡೇಹಳ್ಳಿ, ಶೃಂಗೇರಿ, ಇವುಗಳಲ್ಲಿ ಭತ್ತ; ಚಿಕ್ಕಮಗಳೂರು, ತರೀಕೆರೆ, ಕಡೂರು, ಮೂಡಿಗೆರೆ, ಇವುಗಳಲ್ಲಿ ರಾಗಿ; ಚಿಕ್ಕಮಗಳೂರು, ತರೀಕೆರೆ, ಕಡೂರು, ಇವುಗಳಲ್ಲಿ ಅವರೆ; ಚಿಕ್ಕಮಗಳೂರು, ತರೀಕೆರೆ, ಇವುಗಳಲ್ಲಿ ತೊಗರಿ; ಚಿಕ್ಕಮಗಳೂರು, ಕಡೂರು, ಇವುಗಳಲ್ಲಿ ಹುರುಳಿ; ಕಡೂರು, ತರೀಕೆರೆ ಇವುಗಳಲ್ಲಿ ಜೋಳ; ತರೀಕೆರೆಯಲ್ಲಿ ನವಣೆ; ಚಿಕ್ಕಮಗಳೂರು, ಕಡೂರು, ಎಡೇಹಳ್ಳಿ, ಇವುಗಳಲ್ಲಿ ಕಬ್ಬು; ಚಿಕ್ಕಮಗಳೂರು, ಕೊಪ್ಪ, ಮೂಡಿಗೆರೆ, ಎಡೇಹಳ್ಳಿ, ಇವುಗಳಲ್ಲಿ ಕಾಫಿ; ಕೊಪ್ಪದಲ್ಲಿ ಮೆಣಸು; ಕೊಪ್ಪ, ಎಡೇಹಳ್ಳಿ, ಶೃಂಗೇರಿ, ಇವುಗಳಲ್ಲಿ ಅಡಿಕೆ; ಕೊಪ್ಪ, ಮೂಡಿಗೆರೆ, ಇವುಗಳಲ್ಲಿ ಯಾಲಕ್ಕಿ; ಇವುಗಳಲ್ಲಿ ಒಳ್ಳೆ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ. ಕೊಡೂರಿನಲ್ಲಿ ಹರಿಗೆ "ಕೊಂಪ್ಲೀ ಹುಳುವು" ಹಿಡಿದು ಇದೆಯೆಂದು ರಿಪೋರ್ಟಾಗಿದೆ.

ಕುಯ್ಯಲಾದ ಪೈರುಗಳು ಮತ್ತು ಅವುಗಳ ಉತ್ಪತ್ತಿ :—

ಚಿಕ್ಕಮಗಳೂರಿನಲ್ಲಿ ಭತ್ತ ದೊಡ್ಡ ರಾಗಿ, ಉತ್ಪತ್ತಿ ... 10 ಆಣೆ.

ಕಡೂರಿನಲ್ಲಿ ಜೋಳ ... 8 ಆಣೆ.
ಸಾವೆ ... 4 ಆಣೆ.
ರಾಗಿ ... 8 ಆಣೆ.

ತರೀಕೆರೆಯಲ್ಲಿ ರಾಗಿ ಮತ್ತು ಜೋಳ ಉತ್ಪತ್ತಿ ... 12 ಆಣೆ.

ಕೊಪ್ಪದಲ್ಲಿ ಅಡಿಕೆ ... 4 ಆಣೆ.

ಕೊಪ್ಪದಲ್ಲಿಯೂ ಮತ್ತು ಮೂಡಿಗೆರೆಯಲ್ಲಿಯೂ ಯಾಲಕ್ಕಿ ಉತ್ಪತ್ತಿ ... 15 ಆಣೆ.

ಎಡೇಹಳ್ಳಿಯಲ್ಲಿ ಭತ್ತ ಮತ್ತು ಅಡಿಕೆ ಉತ್ಪತ್ತಿ ... 12 ಆಣೆ.

10. ಕಾಲದ ಆವಸ್ಥಿತಿಯು ಚೆನ್ನಾಗಿದೆ. ಚಿಕ್ಕಮಗಳೂರು, ಕಡೂರು, ತರೀಕೆರೆ, ಕೊಪ್ಪ, ಮೂಡಿಗೆರೆ ಈ ತಾಲ್ಲೂಕುಗಳು ಮತ್ತು ಎಡೇಹಳ್ಳಿ ಸಬ್ ತಾಲ್ಲೂಕು ಇವುಗಳ ಕೆಲವು ಭಾಗಗಳಲ್ಲಿ ಮಳೆಯು ಬೇಕಾಗಿದೆಯೆಂದು ರಿಪೋರ್ಟಾಗಿದೆ. ಆಹಾರ ಜಿನಸು ಸಾಕು.

11. ಕಸಬಾ ಚಿಕ್ಕಮಗಳೂರಿನಲ್ಲಿಯೂ ಮತ್ತು ಚಿಕ್ಕಮಗಳೂರು, ಕಡೂರು ಈ ತಾಲ್ಲೂಕುಗಳಲ್ಲಿಯೂ ಪ್ಲೇಗ್ ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ಪಶುಗಳು ಸಾಧಾರಣವಾಗಿ ಆರೋಗ್ಯವಾಗಿವೆ. ಆದರೆ ಚಿಕ್ಕಮಗಳೂರು, ಮೂಡಿಗೆರೆ, ಕೊಪ್ಪ ಈ ತಾಲ್ಲೂಕುಗಳಿಗೆ ಸೇರಿದ ಕೆಲವು ಗ್ರಾಮಗಳಲ್ಲಿ "ದೊಡ್ಡರೋಗವು" ಇನ್ನೂ ಇರುತ್ತಲಿದೆಯೆಂದು ರಿಪೋರ್ಟಾಗಿದೆ. ತರೀಕೆರೆಯಲ್ಲಿ ಅಡಗಿ ಬರುತ್ತಲಿದೆಯೆಂದು ರಿಪೋರ್ಟಾಗಿದೆ. ಕೊಪ್ಪಕ್ಕೆ ಸೇರಿದ ಕೆಲವು ಗ್ರಾಮಗಳಲ್ಲಿ "ಲಾಲ್ ಸಂಕೋಲೆ ರೋಗವು" ಇನ್ನೂ ಇರುತ್ತಲಿದೆ. ಕ್ಯಾಟಲ್ ಡಿಸೀಜ್ ಇನ್‌ಸ್ಪೆಕ್ಟರವರ ಸಲಹೇ ಮೇರಿಗೆ ರೋಗಪೀಡಿತ ಜಾನುವಾರುಗಳಿಗೆ ಚಿಕಿತ್ಸೆಯು ಮಾಡಲ್ಪಡುತ್ತಿದೆಯೆಂದು ರಿಪೋರ್ಟಾಗಿದೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಚಿತ್ರದುರ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9 ನಿಂತಿರುವ ಪೈರುಗಳು—ದೇವನಗೆರೆ, ಹೊಳಕಾಲ್ಮೂರು, ಇವುಗಳು ಹೊರ್ತು, ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಮಳೆ ಇಲ್ಲದ್ದರಿಂದ ಬಾಡಿಹೋಗುತ್ತಿವೆ.

ಒತ್ತನೆಂಗಾದ ಪೈರುಗಳು—ಚಿತ್ರದುರ್ಗ, ದೇವನಗೆರೆ ಈ ತಾಲ್ಲೂಕುಗಳಲ್ಲಿ ಕಡಲೆ ಮತ್ತು ದೇವನಗೆರೆ ತಾಲ್ಲೂಕಿನಲ್ಲಿ ಬರೀ ಜೋಳ.

ಕುಯ್ಯಲಾದ ಪೈರುಗಳು ಮತ್ತು ಅವುಗಳ ಉತ್ಪತ್ತಿ :—

ಚಿತ್ರದುರ್ಗ, ದೇವನಗೆರೆ, ಹಿರಿಯೂರು ಸಬ್ ತಾಲ್ಲೂಕು ಇವುಗಳಲ್ಲಿ ರಾಗಿ—ಉತ್ಪತ್ತಿ 8 ರಿಂದ 10 ಆಣೆ ವರಿಗೆ.

ಚಿತ್ರದುರ್ಗ, ದೇವನಗೆರೆ ಈ ತಾಲ್ಲೂಕುಗಳಲ್ಲಿ ಜೋಳ ಉತ್ಪತ್ತಿ—8 ರಿಂದ 10 ಆಣೆ ವರಿಗೆ.

ಹಿರಿಯೂರು, ಹಿರಿಹರ ಸಬ್ ತಾಲ್ಲೂಕು, ಇವುಗಳಲ್ಲಿ ನವಣೆ ಉತ್ಪತ್ತಿ 6 ರಿಂದ 10 ಆಣೆ ವರಿಗೆ.

ಚಿತ್ರದುರ್ಗ ತಾಲ್ಲೂಕಿನಲ್ಲಿ ಕಬ್ಬು—ಉತ್ಪತ್ತಿ 4 ಆಣೆ.

10. ಕಾಲದ ಆವಸ್ಥಿತಿಯು ಚೆನ್ನಾಗಿದೆ. ಆಹಾರ ಜಿನಸು ಸಾಕು.

11. ಜನಾರೋಗ್ಯವು ಚೆನ್ನಾಗಿದೆ.

12. ಪಶುಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಬೆಂಗಳೂರು,
1907ನೆಯ ಇಪ್ಪತ್ತನೆಯ ನವಂಬರ 12ನೆಯ ತಾರೀಖು.

ಎ. ರಂಗಸ್ವಾಮಿ ಐಯ್ಯಂಗಾರ್,
ರೆವಿನ್ಯೂ ಕಮಿಷನರ.